<u>ದಿಃ18.03.2023 OS No. 279/2018 PW-1</u>

ದಿಃ18.03.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ.ಸಿ.ಎಸ್.ಡಿ. ವಕೀಲರಿಂದ</u>

ಜವರೇಗೌಡ ಎಂದರೆ ನನ್ನ ತಾತನ ತಂದೆಯಾಗಿರುತ್ತಾರೆ. ಸದರಿ ಜವರೇಗೌಡ ರವರಿಗೆ ನನಗೆ ಗೊತ್ತಿರುವ ಮಟ್ಟಿಗೆ ಒಬ್ಬರೇ ಮಗ ಇರುತ್ತಾರೆ. ಗದ್ದೇಗೌಡ ರಿಗೆ ಆರು ಜನ ಮಕ್ಕಳು ಇರುತ್ತಾರೆ. 7ನೇ ಪ್ರತಿವಾದಿಯು ನನ್ನ ತಂದೆಯ 2ನೇ ಪತ್ನಿ ಎಂದರೆ ಸರಿ. ರಾಮು ಮತ್ತು 7ನೇ ಪ್ರತಿವಾದಿಗೆ ಒಬ್ಬ ಹೆಣ್ಣು ಮಗಳಿರುತ್ತಾರೆ. ಸದರಿಯವರು ಈಗ ಪ್ರಾಪ್ತ ವಯಸ್ಕರಾಗಿರುತ್ತಾರೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಗದ್ದೇಗೌಡ ರವರು ನನ್ನ ತಾತ ಎಂದು ತೋರಿಸಲು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ತಾನು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿ ವಂಶವೃಕ್ಷ ಇರುವುದಿಲ್ಲವೆಂದು ನುಡಿದಿರುತ್ತಾರೆ. ಗದ್ದೇಗೌಡರಿಗೆ ಆರು ಜನ ಮಕ್ಕಳುಎಂದು ತೋರಿಸಲು ನಾನು ವಂಶವೃಕ್ಷ ಹಾಜರುಪಡಿಸಿದ್ದು ಆದರೆ ನನ್ನ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳಲ್ಲಿ ಅದು ಕಾಣಿಸುವುದಿಲ್ಲ. ಮುಂದಿನ ದಿನಾಂಕದಂದು ವಂಶವೃಕ್ಷವನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.